# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 19.12.2020 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ಡಾ॥ ಎಂ. ಜಿ. ಹಳ್ಳಿ ಶಿವರಾಂ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾನಡವಳಿಗಳು

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ॥ ಎಂ. ಜಿ. ಹಳ್ಳಿ ಶಿವರಾಂ, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಸುಮಂತ್ ಗೌಡ ಸಿ. ಎಸ್., ಸಹಾಯಕ ಅಭಿಯಂತರರು, ವಾರ್ಡ್ ನಂ.42 ಹಾಗೂ ಸದಸ್ಯ ಕಾರ್ಯದರ್ಶಿ
3. ನಾರಾಯಣ್, ಹಿರಿಯ ಆರೋಗ್ಯ ಪರಿವೀಕ್ಷಕರು,
4. ಮಣಿ ಮೇಘಲೈ, ಕಿರಿಯ ಆರೋಗ್ಯ ಪರಿವೀಕ್ಷಕರು,
5. ಡಾ॥ ರೇಣುಕಾ ಪ್ರಸಾದ್.ಜಿ.ಎನ್.
6. ನಿರ್ಮಲ, ಕಂದಾಯ ವಸೂಲಿಗಾರರು,
7. ನರಸಿಂಹಯ್ಯ.ಎನ್. ಕಂದಾಯ ಪರಿವೀಕ್ಷಕರು
8. ದೀಪಕ್.ಹೆಚ್.ಸಿ, ಸ.ಅ.ಜಲಮಂಡಳಿ
9. ಎಂ.ನಾಗರಾಜು.ಬೆಸ್ಕಾಂ
10. ನಾರಾಯಣಸ್ವಾಮಿ, ಮೇಲ್ವಿಚಾರಕರು
11. ದೇವರಾಜ್, ಮೇಲ್ವಿಚಾರಕರು
12. ದಾಕ್ಷಯಣಿ ಲಿಂಕ್ ವರ್ಕರ್
13. ಪ್ರಮೀಳ ಲಿಂಕ್ ವರ್ಕರ್
14. ರಾಜು. ಬೀದಿ ದೀಪಗಳು
15. ಮಮತ.ಆರೋಗ್ಯ ಇಲಾಖೆ.

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಹಿಂದಿನ ಸಭೆಯ ನಡವಳಿಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ತಿಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಧ್ಯಕ್ಷರು ಕೇಳಿದರು. ಮತದಾರರ ಪಟ್ಟಿ ತಯಾರಿಕೆಗೆ ಅರ್ಜಿ ಸಲ್ಲಿಸಲು ದಿನಾಂಕ:18.12.2020 ಕೊನೆಯ ದಿನವಾಗಿದ್ದು 1500 ನೂತನ ಮತದಾರರ ಅರ್ಜಿ ಸ್ವೀಕರಿಸಲಾಗಿದೆ ಎಂದು ತೆರಿಗೆ ನಿರೀಕ್ಷಕಿ ಕೆ.ನಿರ್ಮಲ ರವರು ಸಭೆಗೆ ತಿಳಿಸಿದರು.

Scanned by CamScanner

ಹಿಂದಿನ ಸಭೆಗಳಲ್ಲಿ ಸೂಚಿಸಿದ್ದ ಎಲ್ಲಾ ಕಾಮಗಾರಿಗಳನ್ನು ಸರಿಪಡಿಸಿರುವುದಾಗಿ ಮತ್ತು ಜಿಯೋ ಕೇಬಲ್ ನವರು ತೆಗೆದಿರುವ ಗುಂಡಿಗಳನ್ನು ಮುಚ್ಚಿದ ಕೂಡಲೇ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ಜಲಮಂಡಳಿ ಅಭಿಯಂತರರು ನೋಡಲ್ ಅಧಿಕಾರಿಗಳಿಗೆ ತಿಳಿಸಿದರು.

ವಾರ್ಡ್ ನ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ತೆರವುಗೊಳಿಸಲು ಮಾನ್ಯ ಅಧ್ಯಕ್ಷರು ರವರು ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಎಲ್ಲಾ ಬ್ಲಾಕ್ ಸ್ಪಾಟ್ ಗಳಲ್ಲಿ ಕಸಗಳನ್ನು ತೆರವುಗೊಳಿಸಿರುವುದಾಗಿ ತಿಳಿಸಿದರು. ಉಳಿದಿರುವ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಬೇಕು ಅದಕ್ಕೂ ಮುನ್ನಾ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಹಾಕುವವರನ್ನು ಪತ್ತೆ ಹಚ್ಚಿ ದಂಡ ವಿಧಿಸಬೇಕು ಎಂದು ಅಧ್ಯಕ್ಷರು ಸೂಚಿಸಿದರು.

**ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ಮತ್ತು ಮಾರ್ಷಲ್ ವಾರ್ಡ್ ನಂ.42**

ಡಾ||ರೇಣುಕ ಪ್ರಸಾದ್ ರವರು ಮಾತನಾಡಿ ಸರ್ಕಾರಿ ಆಸ್ಪತ್ರೆ ಎದುರು ರಸ್ತೆಯು ತುಂಬ ಹದಗೆಟ್ಟಿದ್ದು ಸಾರ್ವಜನಿಕರು ನಡೆದು ಬರಲು ಸಾಧ್ಯವಿಲ್ಲವೆಂದು, ಆಟೋ ಮತ್ತು ಕಾರುಗಳಲ್ಲಿ ಬರಲು ದುಸ್ಸಾಹಾಸ ಮಾಡಬೇಕಾಗಿದೆ ಎಂದು, ತುರ್ತಾಗಿ ಸರಿಪಡಿಸಿ ಕಾಂಕ್ರೇಟ್ ಅಥವಾ ಡಾಂಬರ್ ರಸ್ತೆ ನಿರ್ಮಿಸಿಕೊಡಲು ಕೋರಿದರು. ಹಾಗೂ ಕೋವಿಡ್ -19 ವ್ಯಾಕ್ಸಿನೇಷನ್ ಬರುತ್ತಿರುವ ಹಿನ್ನೆಲೆಯಲ್ಲಿ ಸೂಕ್ತ 3 ಸ್ಥಳಗಳನ್ನು ಗುರುತಿಸಿ ಸಿದ್ಧಪಡಿಸಲು ಸಂಬಂದಪಟ್ಟವರಿಗೆ ಸೂಚಿಸಬೇಕೆಂದು ಕೋರಿದರು. ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.42**

ವಾರ್ಡ್ ನ ಸದಸ್ಯರು ಮಾತನಾಡಿ ಸಾಕಷ್ಟು ರಸ್ತೆಗಳಲ್ಲಿ ಬೀದಿ ದೀಪಗಳು ಕೆಟ್ಟಿದ್ದು. ಕೆಲವು ಸಮಯ ಬಂದು ನಂತರ ನಂದಿಹೋಗುವುದು ಸರ್ವೆಸಾಮನ್ಯವಾಗಿರುವುದು ಕಂಡುಬಂದಿದ್ದು. ಇದರ ಸಂಬಂಧ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಕೋರಿದರು. ಬೀದಿ ದೀಪಗಳ ಅವ್ಯವಸ್ಥೆಯನ್ನು ಸರಿಪಡಿಸಿ ಮುಂದಿನ ಸಭೆಯೊಳಗಾಗಿ ಸಭೆಗೆ ವರದಿ ಮಾಡುವಂತೆ ಅಧ್ಯಕ್ಷರು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ (ಬೀದಿ ದೀಪಗಳು) ವಾರ್ಡ್ ನಂ.42**

Scanned by CamScanner

ವಾರ್ಡ್ ನ ಸದಸ್ಯರು ಮಾತನಾಡಿ ಸಂಜಯಗಾಂಧಿನಗರದಲ್ಲಿ ಇದುವರೆವಿಗೂ ಕುಡಿಯುವ ನೀರಿನ ಅಂದರೆ ಕಾವೇರಿ ನೀರು 8 ರಿಂದ 10 ದಿನಕ್ಕೊಮ್ಮೆ ಬರುತ್ತಿದ್ದು, ಸಾರ್ವಜನಿಕರಿಗೆ ನೀರಿಗಾಗಿ ಅಹಕಾರ ಕಂಡುಬಂದಿದ್ದು, ತಕ್ಷಣ ಜಲಮಂಡಳಿರವರು ಮೇಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು

**ಕ್ರಮ: ಸಹಾಯಕ ಅಭಿಯಂತರರು, ಜಲಮಂಡಳಿ, ವಾರ್ಡ್ ನಂ.42**

ತೋಟಗಾರಿಕೆ ಇಲಾಖೆಯವರಿಗೆ ವಾರ್ಡ್ ನಂ.42 ಲಕ್ಷ್ಮಿದೇವಿನಗರ ವಿಧಾನ ಸೌಧ ಬಡಾವಣೆಯಲ್ಲಿರುವ ಪಾರ್ಕ್‌ಗೆ ದೀಪಗಳ ಹಾಗೂ ಸ್ವಚ್ಛತೆ ಹಾಗೂ ಭದ್ರತೆಯ ಬಗ್ಗೆ ಯಾವುದೇ ರೀತಿಯ ಕ್ರಮಕೈಗೊಳ್ಳದಿರುವ ಬಗ್ಗೆ ಅಧ್ಯಕ್ಷರು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ದೂರವಾಣಿ ಕರೆಮಾಡಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

**ಕ್ರಮ: ಅಧೀಕ್ಷಕರು ತೋಟಗಾರಿಕೆ ಇಲಾಖೆ ಆರ್ ಆರ್ ನಗರ ವಲಯ.**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸುಮಂತ್ ಗೌಡ ಸಿ. ಎಸ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:42

(ಡಾ|| ಎಂ. ಜಿ. ಹಳ್ಳ ಶಿವರಾಂ)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned by CamScanner